ಉತ್ತರ ವಲಯ, ಬೆಳಗಾವಿರವರಿಗೆ ದಿನಾಂಕ 06–07–2011ರಂದು ಸಲ್ಲಿಸಿದ ಮನವಿಯನ್ನು ಪುರಸ್ಕರಿಸಿ ಪೊಲೀಸ್ ಅಧೀಕ್ಷಕರು, ಬಾಗಲಕೋಟೆ ಜಿಲ್ಲೆರವರ ಪತ್ರ ಸಂಖ್ಯೆ: ಸಿಬ್ಬಂದಿ–1/ಸಿಆರ್–69/2011.

ದಿನಾಂಕ 14–07–2011ರಂದು ಇನ್‌ಸ್ಪೆಕ್ಟರ್ ಜನರಲ್ ಆಫ್ ಪೊಲೀಸ್, ಉತ್ತರ ವಲಯ, ಬೆಳಗಾವಿ ಕಛೇರಿಗೆ ಸಲ್ಲಿಸಲಾಗಿದ್ದು, ಸದರಿ ಪಿ.ಎಸ್.ಐ. ರವರ ಮನವಿಯನ್ನಾಧರಿಸಿ ವಲಯ ಕಛೇರಿ ಆದೇಶ ಸಂಖ್ಯೆ: ಸಿಬಿ/04/2011 ದಿನಾಂಕ 24–09–2011ರನ್ವಯ ಓ.ಓ.ಡಿ. ಆಧಾರದ ಮೇಲೆ ಝಳಕಿ ಪೊಲೀಸ್ ಠಾಣೆಗೆ ವರ್ಗಾವಣೆ ಮಾಡಿದ್ದು, ಎಸ್.ಪಿ. ಬಾಗಲಕೋಟೆ ಜಿಲ್ಲೆರವರ ಜ್ಞಾಪನ ಸಂಖ್ಯೆ: ಸಿಬ್ಬಂದಿ–1/ಸಿಆರ್–158/2011 ದಿನಾಂಕ 03–10–2011ರ ಪ್ರಕಾರ ಕರ್ತವ್ಯದಿಂದ ಬಿಡುಗಡೆ ಮಾಡಲಾಗಿದೆ.

ಶ್ರೀಮತಿ ಶೋಭಾ, ಮಹಿಳಾ ಪಿ.ಎಸ್.ಐ. ರವರನ್ನು ತಕ್ಷಣದಿಂದ ಜಾರಿಗೆ ಬರುವರಿತೆ ಓ.ಓ.ಡಿ. ಆಧಾರದ ಮೇಲೆ ಆದರ್ಶ ನಗರ (ಕಾ&ಸು) ಠಾಣೆಗೆ ಸ್ಥಳ ನಿಯುಕ್ತಿಗೊಳಿಸಿದ್ದು ಸದರಿಯವರು ಝಳಕಿ ಪೊಲೀಸ್ ಠಾಣೆಯಿಂದ ಬಿಡುಗಡೆ ಹೊಂದಿ ಆದರ್ಶ ನಗರ ಪೊಲೀಸ್ ಠಾಣೆಯಲ್ಲಿ ದಿನಾಂಕ 07–12–2011 ರಂದು ವರದಿ ಮಾಡಿಕೊಂಡಿರುತ್ತಾರೆ ಎಂದು ಪೊಲೀಸ್ ಅಧೀಕ್ಷಕರು, ಬಿಜಾಪುರ ರವರು ವರದಿ ಮಾಡಿರುತ್ತಾರೆ.

ವೈದ್ಯಕೀಯ ಉಪಕರಣಗಳ ಖರೀದಿಯಲ್ಲಿ ಆದ ಅವ್ಯವಹಾರ

163 (530) ಶ್ರೀ ಬಗಲಿ ಸಾರ್ವಭೌಮಗೌಡ (ಇಂಡಿ) :–ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ:–

ಅ) ವೈದ್ಯಕೀಯ ಶಿಕ್ಷಣ ಇಲಾಖೆಯಲ್ಲಿ ಉಪಕರಣಗಳ ಖರೀದಿಯಲ್ಲಿ ನಡೆದಿದೆಯೆನ್ನಲಾದ ಅವ್ಯವಹಾರ ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮವೇನು;

ಆ) 2010–11 ಮತ್ತು ಪ್ರಸಕ್ತ ಹಣಕಾಸಿನ ವರ್ಷದಲ್ಲಿ ವೈದ್ಯಕೀಯ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಆಸ್ಪತ್ರೆಗಳಲ್ಲಿ ಯಾವ ಯಾವ ವೈದ್ಯಕೀಯ ಉಪಕರಣಗಳನ್ನು ಯಾವ ಯಾವ ಪೂರೈಕೆದಾರರಿಂದ ಯಾವ ಯಾವ ಜಿಲ್ಲೆಯಲ್ಲಿ ಪಡೆಯಲಾಯಿತು.

ಇ) ಈ ಖರೀದಿಗಳಿಗೆ ಯಾವ ಪದ್ಧತಿ ಅನುಸರಿಸಲಾಯಿತು; ಈ ವಿಶಿಷ್ಟ ಪದ್ಧತಿ ಅನುಸರಿಸಲು ಕಾರಣಗಳೇನು?

ಶ್ರೀ ಎಂ. ಎಸ್. ರಾಮದಾಸ್ (ವೈದ್ಯಕೀಯ ಶಿಕ್ಷಣ ಸಚಿವರು):-

ಅ) ವೈದ್ಯಕೀಯ ಶಿಕ್ಷಣ ಇಲಾಖೆಯ ನೇರ ನಿಯಂತ್ರಣದಲ್ಲಿ ಬರುವ ಆಸ್ಪತ್ರೆಗಳಲ್ಲಿ ಉಪಕರಣಗಳ ಖರೀದಿಯಲ್ಲಿ ಅವ್ಯವಹಾರ ನಡೆದಿರುವ ಬಗ್ಗೆ ಸ್ವೀಕೃತವಾಗಿರುವ ದೂರುಗಳ ಬಗ್ಗೆ ನಿಯಮಾನುಸಾರ ಪರಿಶೀಲಿಸಲಾಗುತ್ತಿದೆ.

2010-11ನೇ ಸಾಲಿನಲ್ಲಿ ವೈದ್ಯಕೀಯ ಶಿಕ್ಷಣ ಇಲಾಖೆಯ ನೇರ ನಿಯಂತ್ರಣದಲ್ಲಿ ಬರುವ ಕೆಳಕಂಡ ಬೋಧಕ ಆಸ್ಪತ್ರೆಗಳಲ್ಲಿ ಉಪಕರಣಗಳನ್ನು ಖರೀದಿಸಲಾಗಿದ್ದು, ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

1) ಸರ್ಕಾರಿ ವೆನ್‌ಲಾಕ್ ಆಸ್ಪತ್ರೆ, ಮಂಗಳೂರು

2) ಸರ್ಕಾರಿ ಲೇಡಿಗೋಪನ್ ಆಸ್ಪತ್ರೆ, ಮಂಗಳೂರು

3) ಸಿ. ಜಿ. ಆಸ್ಪತ್ರೆ, ದಾವಣಗೆರೆ

4) ಮಹಿಳೆಯರ ಮತ್ತು ಮಕ್ಕಳ ಆಸ್ಪತ್ರೆ, ದಾವಣಗೆರೆ

5) ಜಿಲ್ಲಾ ಆಸ್ಪತ್ರೆ, ಗುಲ್ಬರ್ಗಾ

ಇ) ಈ ಖರೀದಿ ಪ್ರಕ್ರಿಯೆಯನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999 ಹಾಗೂ ನಿಯಮಗಳು 2000 ರನ್ವಯ ಹಾಗೂ ಈ ನಿಯಮಗಳಡಿ ಕಾಲಕಾಲಕ್ಕೆ ಸರ್ಕಾರದಿಂದ ಹೊರಡಿಸಿರುವ ಆದೇಶಗಳು, ಅಧಿಸೂಚನೆಗಳು ಮತ್ತು ಸುತ್ತೋಲೆಗಳನ್ನು ಅನುಸರಿಸಿ ಖರೀದಿಸಲಾಗಿದೆ.

ಅಂಗನವಾಡಿ ಅಪೌಷ್ಟಿಕ ಮಕ್ಕಳ ಸಂಖ್ಯೆ ಮತ್ತು ಮರಣ ಪ್ರಮಾಣ

165 (532) ಡಾ॥ ಬಗಲಿ ಸಾರ್ವಭೌಮ ಸಾತಗೌಡ (ಇಂಡಿ) :-ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-

ಅ) ರಾಜ್ಯದಲ್ಲಿ 2008-09, 2009-10, 2010-11 ಮತ್ತು 2011 ರಲ್ಲಿ ಅಂಗನವಾಡಿಗಳಲ್ಲಿ ಇರುವ ಅಪೌಷ್ಠಿಕ ಮಕ್ಕಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮತ್ತು ವಿಧಾನ ಸಭಾ ಕ್ಷೇತ್ರವಾರು ಮಾಹಿತಿ ನೀಡುವುದು)

ಆ) ರಾಜ್ಯದಲ್ಲಿ 2008-09, 2009-10, 2010-11 ಮತ್ತು 2011ರಲ್ಲಿ ಅಂಗನವಾಡಿಯಲ್ಲಿದ್ದು ಮರಣ ಹೊಂದಿದ ಮಕ್ಕಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮತ್ತು ವಿಧಾನ ಸಭಾ ಕ್ಷೇತ್ರವಾರು ಮಾಹಿತಿ ನೀಡುವುದು)